ಲೋಹಜಂಗ್‌ನ ಒಂದು ಮನೆ





ಬಿಳಿ ಜಮಖಾನ ಹಾಸಿದಂತೆ ಮಂಜು

ಟೆಂಟ್‌ನಲ್ಲಿನ ನಮ್ಮ ಕಡೆಯ ರಾತ್ರಿ.

ಮರುದಿನ ಬೆಳಿಗ್ಗೆ ಎದ್ದು ಆ ಕಾಡಿಗೂ, ಪರ್ವತಗಳಿಗೂ ಒಮ್ಮೆ ವಿದಾಯ ಹೇಳಿ ನಮ್ಮ ಬೇಸ್ ಕ್ಯಾಂಪ್ ಲೋಹಜಂಗ್‌ನತ್ತ ಕಾಲ್ನಡಿಗೆಯಲ್ಲೇ ಪ್ರಯಾಣ ಬೆಳೆಸಿದೆವು. ಒಟ್ಟು 12 ಕಿ.ಮೀ.ಗಳ ದಾರಿಯನ್ನು ಸುಮಾರು ಆರೇಳು ಗಂಟೆಗಳಲ್ಲಿ ಪೂರ್ಣಗೊಳಿಸಿದೆವು. ಆ ರಾತ್ರಿ ಅಲ್ಲಿಯೇ ವಿಶ್ರಮಿಸಿ ಬೆಳಕು ಹರಿದಾಗ ನಾವೂ ಕೂಡ ಹಿಮಾಲಯದ ಕೊಂಚ ಭಾಗವನ್ನಾದರೂ ಅನ್ವೇಷಣೆ ಮಾಡಿದೆವಲ್ಲ ಎಂಬ ಸಾರ್ಥಕತೆ ನಮ್ಮ ಮನದಲ್ಲಿತ್ತು. ಗೈಡ್‌ಗೆ ಧನ್ಯವಾದಗಳನ್ನು ಹೇಳಿ, ಮತ್ತೆ ರೂಪ್ ಕುಂಡ್ ಚಾರಣದಲ್ಲಿ ಭೇಟಿಯಾಗುವ ಭರವಸೆಯನ್ನು ನೀಡಿ ಬೀಳ್ಕೊಟ್ಟೆವು.